ಕರ್ನಾಟಕ ಸರ್ಕಾರ
ವಾಣಿಜ್ಯ ತೆರಿಗೆ ಇಲಾಖೆ

**2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದ ಪ್ರಕರಣ 59ರ ಉಪ ಪ್ರಕರಣ (4)ರ ಅಡಿ ವಾಣಿಜ್ಯ ತೆರಿಗೆಗಳ ಆಯುಕ್ತರು (ಕರ್ನಾಟಕ), ಬೆಂಗಳೂರು ಇವರ ನಡವಳಿಗಳು**

ವಿಷಯ: 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದ ಪ್ರಕರಣ 59(4) ರನ್ವಯ ಕೆಲವು ಸರಕುಗಳ ಮೇಲೆ ಅನ್ವಯವಾಗುವ ತೆರಿಗೆ ದರದ ಬಗ್ಗೆ ಸ್ಪಷ್ಟೀಕರಣ ಕುರಿತು.

ಉಲ್ಲೇಖ: ಮೆ: ಶ್ರೀ ವೆಂಕಟೇಶ್ವರ ವುಡ್ ವರ್ಕ್ಸ್, ಬೆಂಗಳೂರು-560074 ಇವರ ದಿನಾಂಕ 29-04-2015ರ ಅರ್ಜಿ. (ಟಿನ್: 29270313028).

****

2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮಡಿಯಲ್ಲಿ ನೋಂದಣಿದಾರರಾದ ಮೆ: ಶ್ರೀ ವೆಂಕಟೇಶ್ವರ ವುಡ್ ವರ್ಕ್ಸ್, ನಂ.59/1, ಆರ್.ಆರ್. ಮೆಡಿಕಲ್ ಕಾಲೇಜ್ & ಆಸ್ಪಿಟಾಲ್, ಹೆದ್ದಾರಿ, ಅಂಚೆಪಾಳ್ಯ, ಬೆಂಗಳೂರು-560074 ಇವರು ಮೇಲ್ಕಂಡ ಅರ್ಜಿಯಲ್ಲಿ ಅನುಸೂಚಿತವಲ್ಲದ ಸರಕಾದ "ವುಡನ್ ಪ್ಯಾಲೆಟ್" (wooden pallet) ಮೇಲೆ ಅನ್ವಯವಾಗುವ ತೆರಿಗೆ ದರದ ಬಗ್ಗೆ ಸ್ಪಷ್ಟೀಕರಣವನ್ನು ಕೋರಿರುತ್ತಾರೆ.

2. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದ ಪ್ರಕರಣ 59ರ ಉಪ ಪ್ರಕರಣ (4)ರ ಮೇರೆಗೆ ವಾಣಿಜ್ಯ ತೆರಿಗೆ ಆಯುಕ್ತರು (ಕರ್ನಾಟಕ), ಬೆಂಗಳೂರು ಇವರು ತೆರಿಗೆಯ ನಿರ್ಧರಣೆ ಹಾಗೂ ರಾಜಸ್ವದ ಸಂಗ್ರಹಣೆ ಕಾರ್ಯದಲ್ಲಿ ಏಕರೂಪತೆಯನ್ನು ತರುವ ಉದ್ದೇಶಕ್ಕಾಗಿ, ಸದರಿ ಅಧಿನಿಯಮದಡಿಯಲ್ಲಿ ತೆರಿಗೆಗೆ ಒಳಪಡುವ ಸರಕುಗಳ ಸಂಬಂಧದಲ್ಲಿ ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡತಕ್ಕ ತೆರಿಗೆ ದರವನ್ನು ಸ್ಪಷ್ಟಪಡಿಸುವುದು ಅವಶ್ಯವೆಂದು ಅಥವಾ ಯುಕ್ತವೆಂದು ಭಾವಿಸಿದರೆ ಹಾಗೆ ಮಾಡಲು ಅಧಿಕಾರ ಹೊಂದಿದ್ದಾರೆ.

ಅರ್ಜಿದಾರರು ಕೋರಿರುವ ಸ್ಪಷ್ಟೀಕರಣವು ಮೇಲೆ ನಮೂದಿಸಿದ ಉಪಬಂಧದ ವ್ಯಾಪ್ತಿಗೊಳಪಡುವುದರಿಂದ ತೆರಿಗೆ ದರದ ಬಗ್ಗೆ ಸ್ಪಷ್ಟಪಡಿಸುವುದು ಸದರಿ ಉಪಬಂಧದ ಉದ್ದೇಶ ಸಾಧನೆಗಾಗಿ ಅವಶ್ಯವೆಂದು ಮನವರಿಕೆಯಾಗಿದೆ.

3. ಈ ಹಿನ್ನೆಲೆಯಲ್ಲಿ ತೆರಿಗೆ ದರವನ್ನು ಈ ಕೆಳಕಂಡಂತೆ ಸ್ಪಷ್ಟಪಡಿಸಲಾಗಿದೆ.

**ಸ್ಪಷ್ಟೀಕರಣ ಆದೇಶ ಸಂಖ್ಯೆ:ಸಿಎಲ್ಆರ್/ಸಿಆರ್.25/2015-16, ದಿ. 28-05-2015**

ಅನುಸೂಚಿತವಲ್ಲದ ಸರಕಾದ "ವುಡನ್ ಪ್ಯಾಲೆಟ್" (wooden pallet) 2003ರ ಮೌಲ್ಯ ವರ್ಧಿತ ತೆರಿಗೆ ಕಾಯಿದೆಯ ಪ್ರಕರಣ 4(ಬಿ)(iii) ರನ್ವಯ 01-08-2012 ರಿಂದ 31-08-2015ರ ವರೆಗೆ ಶೇ.14.5ರಷ್ಟು ಮತ್ತು ದಿನಾಂಕ 31-03-2015ರ ಅಧಿಸೂಚನೆ ಸಂಖ್ಯೆ ಎಫ್.ಡಿ 40 ಸಿಎಸ್ಎಲ್ 2015 ರನ್ವಯ ದಿನಾಂಕ 01-04-2015 ರಿಂದ ಶೇಕಡಾ 5.5 ರಷ್ಟು ತೆರಿಗೆ ಬಾಧ್ಯತೆಗೊಳಪಡುತ್ತದೆಂದು ಈ ಮೂಲಕ ಸ್ಪಷ್ಟೀಕರಿಸಲಾಗಿದೆ.

(ರಿತ್ವಿಕ್ ಪಾಂಡೆ),
**ವಾಣಿಜ್ಯ ತೆರಿಗೆಗಳ ಆಯುಕ್ತರು,**
(ಕರ್ನಾಟಕ), ಬೆಂಗಳೂರು.